## ಸಮಯ ಬಲಿ

ತೆಲುಗಿನ ಭಾರಿ ವೆಚ್ಚದ ಬಾಹುಬಲಿ–2 ಚಿತ್ರ ಬಿಡುಗಡೆಗೊಂಡಿದೆ. ಈ ಚಿತ್ರದ ಅದ್ದೂರಿತನದ ಬಗೆಗೆ ಎಲ್ಲೆಡೆ ವ್ಯಾಪಕ ಮೆಚ್ಚಿಗೆ ವ್ಯಕ್ತವಾಗಿದೆ. ನಿಜಕ್ಕೂ ಇದೊಂದು ದೃಶ್ಯಕಾವ್ಯವೇ ಸರಿ. ಈ ಚಿತ್ರದ ಬಗೆಗೆ ಏನೂ ಆಕ್ಷೇಪವಿಲ್ಲ ಆದರೆ ಈ ಚಿತ್ರದ ಬಿಡುಗಡೆಗೂ ಮುನ್ನ ಮತ್ತು ನಂತರ ನಮ್ಮ ಕನ್ನಡದ ವಾಹಿನಿಗಳು ವರ್ತಿಸಿದ ರೀತಿ ಮಾತ್ರ ನಮ್ಮ ಆತ್ಮಭಿಮಾನ ಕೆರಳಿಸಿದೆ. ಕನ್ನಡದ ಯಾವ ಚಿತ್ರಗಳಿಗೂ ನೀಡದ ಭಾರೀ ಪ್ರಚಾರವನ್ನು ಈ ಚಿತ್ರಕ್ಕೆ ನೀಡುವುದರ ಮೂಲಕ ವಾಹಿನಿಗಳು ನೀಡಿದ ಸಂದೇಶವಾದರೂ ಏನು? ಈ ಹಿಂದೆ ರಜನೀಕಾಂತರ 'ಕಬಾಲಿ' ಸಿನಿಮಾ ಬಂದಾಗಲೂ ಇದೇ ರೀತಿ ಅತಿರೇಕದ ಪ್ರಚಾರ ನೀಡಿದ್ದವು. ಚಿತ್ರಕ್ಕೆ ಎಷ್ಟು ಬೇಕೋ ಅಷ್ಟು ಪ್ರಚಾರ ನೀಡಿದರೆ ವೀಕ್ಷಕರಿಗೆ ಸಹ್ಯವೆನಿಸುತ್ತದೆ.

—ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ದ್ವೇಷಕ್ಕೆ ವಾರಸ್ದಾರ

ವಾರಸ್ದಾರ ಧಾರಾವಾಹಿ ಝೀ ಟಿವಿಯಲ್ಲಿ ಪ್ರಸಾರವಾಗುತ್ತದೆ. ವಾರಸ್ದಾರ ಎಂದ ಕೂಡಲೇ ಒಬ್ಬನೇ ಮೊಮ್ಮಗ ಎಲ್ಲರೂ ಪ್ರೀತಿಯಿಂದ ಸಾಕುತ್ತಾರೆ ಎಂದುಕೊಂಡಿದ್ದೆ. ಆದರೆ ಈ ಕಥೆಯ ತುಂಬಾ ಬರಿ ಮತ್ಸರ, ಕೋಪ. ಮನುನನ್ನು ಕೊಲ್ಲುವ ವಿಷಯ, ಭವಾನಿಯ ಸಂಸಾರ ಹಾಳುಮಾಡುವುದು ಇದೇ ತುಂಬಿದೆ. ಈ ಕತೆಯಿಂದ ಸಮಾಜಕ್ಕೆ ಕೊಡುಗೆ ಏನು? ಅಂದರೆ ಎಲ್ಲರೂ ದ್ವೇಷ ಅಸೂಯೆಯನ್ನೇ ಕಲಿಯಬೇಕು. ಒಳ್ಳೆಯ ಕತೆಗಳೇ ಇಲ್ಲವೋ ಹೇಗೆ? ಅಬ್ದುಲ್ ಕಲಾಮ್, ಲಾಲ್‌ಬಹದ್ದೂರ್ ಶಾಸ್ತ್ರಿ, ಗಾಂಧೀಜಿ ಇಂತವರ ಜೀವನ ಚರಿತ್ರೆ, ಭಕ್ತಿ ಪ್ರಧಾನವಾದ ಕತೆಗಳು ಬೇಕಾದಷ್ಟಿವೆ.

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

## ಖಡಕ್ ಪಬ್ಲಿಕ್ ಟಿವಿ ನಮ್ಮದು

ಪಬ್ಲಿಕ್ ಟಿವಿ ಬೇರೆ ವಾಹಿನಿಗಳಿಗಿಂತ ವಿಭಿನ್ನವಾಗಿದೆ. ಸುದ್ದಿ ವಿಶ್ಲೇಷಣೆಯನ್ನು ರಂಗನಾಥ್‌ರವರು ರಾಧಾ ಜೊತೆ ಸೇರಿ ಖಡಕ್ ಆಗಿ ನಿರ್ವಹಿಸುತ್ತಿದ್ದಾರೆ. ತಪ್ಪು ಮಾಡಿದವರಿಗೆ ಇರುಸು ಮುರುಸು. ಆದರೆ ಸಾಮಾನ್ಯ ಜನರಿಗೆ ಆಪ್ಯಾಯಮಾನವಾಗಿದೆ. 'ಬೆಳಕು' ಕಾರ್ಯಕ್ರಮ ಇದರಿಂದ ಎಲೆಮರೆಯ ಕಾಯಿಗಳಂತಿರುವ ಪಬ್ಲಿಕ್ ಹೀರೋಗಳನ್ನು ಪರಿಚಯಿಸುತ್ತಿದ್ದಾರೆ. ಹಾಗೆಯೇ ಸಹಾಯ ಹಸ್ತವನ್ನು ನೀಡುತ್ತಿದ್ದಾರೆ.

—ಲಲಿತಾ ಅಂಬಾಗಿಲು, ಉಪ್ಪುಂದ

### ವಾರದ ಪತ್ರ

## ಪ್ರೋತ್ಸಾಹ ಕೊಡಿ

ಝೀ ಟಿವಿಯ 'ವೀಕೆಂಡ್ ವಿಥ್ ರಮೇಶ್' ಕಾರ್ಯಕ್ರಮದಲ್ಲಿ ಪ್ರಸಾರವಾದ ನಟಿ ಪ್ರಿಯಾಮಣಿಯ ಸಾಧನೆ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಕೆಲವು ಟೀಕೆಗಳು ವ್ಯಕ್ತವಾಗುತ್ತಿವೆ. ಅದೇನೇ ಇರಲಿ, ಚಿಕ್ಕ ವಯಸ್ಸಿನಲ್ಲಿ, ಯಾವುದೇ ಸಿನಿಮಾ ಹಿನ್ನೆಲೆ ಇಲ್ಲದೇ ಸಿನಿಮಾಗೆ ಎಂಟ್ರಿ ಕೊಟ್ಟು ತನ್ನದೇ ಆದ ಸಾಧನೆ ಮಾಡಿದ್ದು ಸಣ್ಣ ವಿಷಯವಲ್ಲ. ಆಕೆ ನಟಿಸಿದ ಮೊದಲ ಸಿನಿಮಾ (ಪರುದಿವೀರನ್)ಗಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪಡೆದಿದ್ದು ಏನಾದರೂ ಸಾಧಿಸಬೇಕು ಎನ್ನುವವರಿಗೆ ಪ್ರೇರಣೆಯಾಗುತ್ತೆ.

ಹಾಗೆಯೇ ನಟ– ನಿರ್ದೇಶಕ ರಕ್ಷಿತ್ ಶೆಟ್ಟಿ. ಸಾಧನೆಯ ಹಾದಿಯಲ್ಲಿ ಹೊರಟಿರುವ ಈ ಯುವನಟನಿಗೆ ಪ್ರೋತ್ಸಾಹ ನೀಡಬೇಕೇ ಹೊರತು ಟೀಕೆ – ಟಿಪ್ಪಣಿಗಳಿಂದ 'ನೀನೇನು ಮಹಾ ಸಾಧನೆ ಮಾಡಿದ್ದೀಯ ಆ ಕುರ್ಚಿಯಲ್ಲಿ ಕೂರಲು?' ಎಂದು ಕೂರಂಬು ಎಸೆಯುವುದು ಸರಿಯಲ್ಲ. ನಿರೂಪಕ ರಮೇಶ್ ಅರವಿಂದ್ ಆರಂಭದಲ್ಲೇ ಹೇಳಿದ್ದರು– ಈ ಯುವಕ ಹೊರಟಿರುವ ಹಾದಿ ಕೆಲವರಿಗಾದರೂ ಪ್ರೇರಣೆ ನೀಡಬಹುದು ಎಂದು.

ಅಷ್ಟಕ್ಕೂ ಅಗಾಧ ಸಾಧನೆ ಮಾಡಿದವರಿಗೆ ಬೇಕಾದಷ್ಟು ದೊಡ್ಡ ದೊಡ್ಡ ವೇದಿಕೆಗಳೇ ಸಿಗುತ್ತವೆ. ಈ ವೇದಿಕೆಯಲ್ಲಿ ಬಂದರೆ ಮಾತ್ರ ಸಾಧಕರು ಎಂಬುದೇನಿಲ್ಲವಲ್ಲ.

—ಕೀರ್ತಿ ತಂತ್ರಿ, ಬೆಂಗಳೂರು

## 'ಕಿನ್ನರಿ' ಶೀರ್ಷಿಕೆ ಬದಲಾಗಿದೆಯೇ?

ಕಲರ್ಸ್ ಕನ್ನಡ ವಾಹಿನಿಯಲ್ಲಿ (ಸೋಮವಾರದಿಂದ ಶನಿವಾರದವರೆಗೆ) ಪ್ರತಿ ದಿನ ಸಂಜೆ 6 ಘಂಟೆಗೆ ಪ್ರಸಾರವಾಗುತ್ತಿರುವ ಧಾರಾವಾಹಿ, 'ಕಿನ್ನರಿ' ಈಗ ಹಲವು ಕಂತುಗಳಿಂದ ಮಾರ್ಪಾಡಾದಂತೆ ಕಾಣುತ್ತಿದೆ, ಹೆಚ್ಚಾಗಿ ಫ್ಯಾಷನ್ ಶೋಗೆ ಒತ್ತು ಕೊಡುತ್ತಿದೆ. ಅದಕ್ಕೆ ಪ್ರತ್ಯೇಕ ವಾಹಿನಿಯಿರುವಾಗ, ಅದನ್ನೇ ಈ ಧಾರಾವಾಹಿಯಲ್ಲಿ ಪ್ರತಿಬಿಂಬಿಸುವ ಯೋಜನೆ ಏಕೆ? ಈ ಮಾರ್ಪಾಡಿನಿಂದ ಧಾರಾವಾಹಿ ಮೊದಲಿನಂತೆ ಕಥಾ ಹಂದರದ ಮೇಲಿನ ಹಿಡಿತವನ್ನು ಕಳೆದುಕೊಂಡು, ಅದನ್ನು ನೋಡಲು ಇದ್ದ ಕಾತುರತೆಯನ್ನು ಕಡಿಮೆ ಮಾಡಿದೆ. ಧಾರಾವಾಹಿಯ ಮೂಲ ಕಥಾವಸ್ತುವು ಬದಲಾಗಿದೆ. ಹಾಗೇ ಅದರ ನಿರ್ದೇಶಕರೂ ಸಹ.

—ಸುಂದರ್, ಬೆಂಗಳೂರು

## ಮಹಾಭಾರತ

ಮಹಾಭಾರತ 'ಎಪಿಕ್' ಚಾನೆಲ್‌ನಲ್ಲಿ ಮತ್ತೆ ಪ್ರಸಾರವಾಗುತ್ತಿದೆ. ಹಿಂದೊಮ್ಮೆ ಪ್ರಸಾರವಾಗುತ್ತಿರಬೇಕಾದರೆ ನಮ್ಮೂರಲ್ಲಿ ಬೆರಳೆಣಿಕೆಯಷ್ಟು ಮನೆಯಲ್ಲಿ ಟಿ.ವಿ. ಇತ್ತು. ಮನೆ ಸಿನಿಮಾ ಥಿಯೇಟರ್ ಆಗುತ್ತಿತ್ತು. ಭಾನುವಾರ 9 ಆಯಿತೆಂದರೆ ಅಘೋಷಿತ ಬಂದ್. ಬಿ.ಆರ್. ಛೋಪ್ರಾ ನಿರ್ಮಾಣದ ಮಹಾಭಾರತದ ಮಹಿಮೆ ಇದು. ಅದ್ದೂರಿ ತಾರಾಗಣ, ವೇಷ ಭೂಷಣಗಳು, ಆ ಕಾಲದ ದೃಶ್ಯಗಳನ್ನು ಕಣ್ಣಿಗೆ ಕಟ್ಟಿಕೊಡುವುದು, ಸಂಗೀತ, ಛಾಯಾಗ್ರಹಣ ಸೇರಿದಂತೆ ಯಾವುದನ್ನೂ ಬೆರಳು ಮಾಡಿ ತೋರಿಸುವಂತಿಲ್ಲ. ಶೀರ್ಷಿಕೆ ಗೀತೆಯಂತೂ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ. ಆರಂಭವನ್ನು ನೋಡುವುದೇ ಒಂದು ರೀತಿ ಆಕರ್ಷಣೆ ಆಗಿರುತ್ತದೆ. ಇಂತಹ ಒಂದು ಅದ್ದೂರಿ ಧಾರಾವಾಹಿ ಹಿಂದೆ ಬಂದಿಲ್ಲ. ಮುಂದೆ ಬರುವುದೂ ಇಲ್ಲ. ರಾಮಾಯಣ, ಮಹಾಭಾರತದಂತ ಮಹಾಕಾವ್ಯಗಳು ಅಂದಿಗೂ ಇಂದಿಗೂ ಎಂದೆಂದಿಗೂ ಪ್ರಸ್ತುತ, ಸಾವಿಲ್ಲದ ಕೃತಿ ಎಂದರೆ ಇದೊಂದೇ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ರಸ ಭಂಗ

ಝೀ ಟಿವಿಯ 'ಸರಿಗಮಪ'ದ ಅಭಿಮಾನಿಯಾಗಿರುವ ನಾನು ಇತ್ತೀಚಿನ ಕೆಲವು ವಿಷಯಗಳಿಂದ ಬೇಸರಗೊಂಡಿದ್ದೇನೆ. ಯುಗಾದಿಯ ಮುನ್ನಿನ 'ಎಪಿಸೋಡ್'ನಲ್ಲಿ ಕುಡುಕರ ಹಾಡನ್ನು ಪ್ರಸ್ತುತಪಡಿಸಿದ, ಸ್ಪರ್ಧಿಗಳ ಆಯ್ಕೆ ತಂದ ಮುಜುಗರ ಇನ್ನೂ ನೆನಪಿನಲ್ಲಿದೆ.

ಅದಲ್ಲದೇ ಈಗೀಗ ನಿರೂಪಕಿ ಅನುಶ್ರೀ, ಸ್ಪರ್ಧಿಗಳಲ್ಲಿ ಕೆಲವರನ್ನು 'ಜೋಡಿ' ಮಾಡಲು ಯತ್ನಿಸುವುದು ಅಸಹನೀಯವಾಗಿದೆ. ತೀರ್ಪುಗಾರರಲ್ಲಿ ಒಬ್ಬರನ್ನು 'ಡಾರ್ಲಿಂಗ್' ಎಂದು ಕಿಚಾಯಿಸುವುದು ಕೂಡಾ ಈ ಕಾರ್ಯಕ್ರಮದ ರಸದೌತಣದಲ್ಲಿ ಕಿರಿಕಿರಿ ತರುತ್ತದೆ.

ಹದಿಹರೆಯದ ಸ್ಪರ್ಧಿಗಳು ಉತ್ತಮ ಗಾಯಕರಾಗಲು ಹಣಾಹಣಿ ನಡೆಸುವಾಗ, ಈ ರೀತಿ 'ಜೋಡಿ' ಮಾಡಿದರೆ ಸ್ಪರ್ಧಾಮನೋಭಾವಕ್ಕೆ ಬದಲು ಅವರ ಮನಸ್ಸಲ್ಲಿ ಬೇಡದ ಭಾವಗಳು ಮೂಡುವುದಿಲ್ಲವೇ? ಸ್ಪರ್ಧಿಗಳ ಪೋಷಕರಿಗೂ ಕಸಿವಿಸಿ ತರುವುದು ಸರಿನಾ?

—ಚಂದ್ರಕಾ ಜೆ., ಬೆಂಗಳೂರು

## ಒಂದರ ಛಾಯೆ ಎಲ್ಲದರ ಮೇಲೂ

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುವ ಧಾರಾವಾಹಿಗಳಲ್ಲಿ ಕೆಲವೊಂದು ಅಂಶಗಳು ಒಂದೇ ರೀತಿಯದ್ದಾಗಿರುತ್ತದೆ. ಒಂದರಲ್ಲಿ ಸ್ವಾಮೀಜಿ ಪ್ರವೇಶವಾದರೆ ಇನ್ನಿತರ ಧಾರಾವಾಹಿಗಳಲ್ಲೂ ಸ್ವಾಮೀಜಿ ಪ್ರವೇಶ, ಸಮಸ್ಯೆಗಳಿಗೆ ಪರಿಹಾರ ಕೋರಲು ಶಾಸ್ತ್ರ ಕೇಳುವುದು ಇತ್ಯಾದಿ.

ಇದೆಲ್ಲದರ ಮಧ್ಯೆ ಅಗ್ನಿಸಾಕ್ಷಿ ಕುತೂಹಲವನ್ನು ಉಳಿಸಿಕೊಳ್ಳುತ್ತಾ ಮುಂದೇನು? ಕಾದು ನೋಡುವಂತೆ ಮಾಡುತ್ತಿದೆ. ಹಾಗೆಂದು ಪ್ರೇಕ್ಷಕರ ಸಹನೆಯನ್ನು ಹೆಚ್ಚು ಪರೀಕ್ಷಿಸದೆ ಒಳ್ಳೆಯ ಅಂತ್ಯದೊಂದಿಗೆ ನೋಡಿದ ತೃಪ್ತಿಯನ್ನು ಕೊಡುವ ಜವಾಬ್ದಾರಿಯೂ ನಿರ್ದೇಶಕರದ್ದು. ದಯವಿಟ್ಟು ಇದರ ಕಡೆಯೂ ಗಮನವಿರಲಿ. ಸಿದ್ಧಾರ್ಥನ ನಡೆ ಒಬ್ಬ ಸಮರ್ಥ ನಾಯಕ ನಟನಂತೆ ಮುಂದುವರೆಸುತ್ತಿರುವುದು ಸಂತೋಷದ ವಿಷಯ.

—ಪುಷ್ಪಾ ಶ್ರೀರಾಮರಾಜು, ಬೆಂಗಳೂರು